# ಗಿರಣಿಯ ವಿಸ್ತಾರ

'ಹಳ್ಳಿಗಳು ನಾಶವಾದರೆ ಭಾರತವೂ ನಾಶವಾಗುತ್ತದೆ. ಭಾರತವು ಇನ್ನೆಂದಿಗೂ ಭಾರತವಾಗಿ ಉಳಿಯುವುದಿಲ್ಲ' ಎನ್ನುವ ಗಾಂಧೀಜಿಯ ಎಚ್ಚರಿಕೆಯ ಮಾತು ಇಂದು ಅಕ್ಷರಶಃ ನಿಜವಾಗಿದೆ. ಒಂದು ಕಾಲದಲ್ಲಿ ನಮ್ಮ ಹಳ್ಳಿಗಳಲ್ಲಿ ಅನ್ಯೋನ್ಯಾಶ್ರಯದಲ್ಲಿ ಬದುಕುತ್ತಿದ್ದ ಕುಶಲಕಲೆಗಳು ಇಂದು ಹೇಳಹೆಸರಿಲ್ಲವಾಗಿವೆ. ಈ ಕುಶಲಕಲೆಗಳು ಕೇವಲ ಒಬ್ಬ ವ್ಯಕ್ತಿ ಅಥವಾ ಒಂದು ಕುಟುಂಬಕ್ಕೆ ಮಾತ್ರ ಹುಟ್ಟಿಕೊಂಡವಲ್ಲ! ಇವೆಲ್ಲ ಹಳ್ಳಿಗಾಡಿನ ಆರ್ಥಿಕ ವ್ಯವಹಾರವನ್ನು ಸಮತೋಲನದಲ್ಲಿಟ್ಟಿದ್ದ ವೃತ್ತಿ ಕಲೆಗಳಾಗಿದ್ದವು. ಇಂದು ಈ ನೂರಾರು ಕುಶಲಕಲೆಗಳೆಲ್ಲ ಅಭಿವೃದ್ಧಿ ಅಥವಾ ಯಂತ್ರನಾಗರಿಕತೆಯ ತೊತ್ತಳ ತುಳಿತಕ್ಕೆ ಈಡಾಗಿ ನಾಮಾವಶೇಷವಾಗಿವೆ. ಹಳ್ಳಿ ಹಳ್ಳಿಗಳಲ್ಲಿದ್ದ ನೇಕಾರರು, ಕುಂಬಾರರು, ಮೇದರು, ಸುಣ್ಣಗಾರರು, ಕಮ್ಮಾರರು, ಗಾಣಿಗರು, ಚಾಪೆ ಹೆಣೆಯುವವರು, ಬಾಚಣಿಗೆ, ಕಂಬಳಿ ನೇಕಾರಿಕೆ ಮಾಡುತ್ತಿದ್ದ ಎಲ್ಲ ಕಿರು ವೃತ್ತಿಗಳವರನ್ನೂ ವಸಾಹತೋತ್ತರ ನಾಗರಿಕತೆ ನುಂಗಿ ನೀರುಕುಡಿದಿದೆ.

ಉಸಿರುಗಟ್ಟಿಸುವ ಬೃಹತ್ ಉದ್ದಿಮೆಗಳ ಮೇಲಾಟದಲ್ಲಿ ಇಂತಹ ಸಣ್ಣ ಸಣ್ಣ ಕುಶಲಕಲೆಗಳನ್ನೇ ನಂಬಿ ಜೀವಿಸುತ್ತಿದ್ದ ಸಣ್ಣ ಸಣ್ಣ ಸಮುದಾಯಗಳಿದ್ದವು. ಬೃಹತ್ ಬಂಡವಾಳಿಗರ ದಾಳಿಗೆ ತುತ್ತಾಗಿ ತಮ್ಮ ವೃತ್ತಿಯನ್ನು ಕಳೆದುಕೊಂಡ ಇಂತಹ ನೂರಾರು ಸಮುದಾಯಗಳನ್ನೆಲ್ಲ ಇಂದು ಕಣ್ಣು ಕಟ್ಟಿ ಕಾಡಿಗೆ ಬಿಟ್ಟಂತಾಗಿದೆ! ಖಾನೆಹೊಸಳ್ಳಿ, ತೊರೆ ಕೋಲಮ್ಮನಹಳ್ಳಿ, ಕೊಂಡ್ಲಹಳ್ಳಿ, ಮೊಳಕಾಲ್ಮೂರು ಇಂತಹ ನೂರಾರು ಸಣ್ಣ ಸಣ್ಣ ಹಳ್ಳಿಗಳಲ್ಲಿ ಶೇ. 60ರಷ್ಟು ನೇಕಾರಿಕೆ ಮಾಡುವ ಕುಟುಂಬದವರಿದ್ದರು. ಕುಟುಂಬಗಳಲ್ಲಿದ್ದ ಅವರ ಮಗ್ಗಗಳೆಲ್ಲ ಇಂದು ಕಾಲಗರ್ಭ ಸೇರಿವೆ. ನೇಕಾರಿಕೆ ಮಾಡುತ್ತಿದ್ದವರೆಲ್ಲ ಕೂಲಿ ಕೆಲಸಕ್ಕಾಗಿ ನಗರಗಳ ಪಾಲಾಗಿದ್ದಾರೆ. ಅವರ ಮನೆಗಳೆಲ್ಲ ಪಾಳುಬಿದ್ದಿವೆ. ದೊಡ್ಡೇರಿ, ಗುಡಿಹಳ್ಳಿಗಳಲ್ಲಿದ್ದ ನೂರಾರು ಸುಣ್ಣದ ಗುಮ್ಮಿಗಳು ಹಂದಿ, ನಾಯಿಗಳ ವಾಸಸ್ಥಳಗಳಾಗಿವೆ. ಕುಂಬಾರರ ಆವುಗೆಗಳಲ್ಲಿ ಬರಿ ಬೂದಿ ಮಾತ್ರ ಉಳಿದಿದೆ. ಕಂಬಳಿ ನೇಕಾರರು ತಮ್ಮ ಕಂಬಳಿಗಳಿಗೆ ಗ್ರಾಹಕರಿಲ್ಲದೆ ತಮ್ಮ ವೃತ್ತಿಯನ್ನೇ ತೊರೆದಿದ್ದಾರೆ. ವರ್ಷಕ್ಕೊಮ್ಮೆ ಕುರಿಗಾಯಿಗಳ ಹತ್ತಿರ ಹೋಗಿ ಬಂಡು ಕತ್ತರಿಸಿಕೊಂಡು ಅವರಿಗೆ ಕಂಬಳಿ ಕೊಟ್ಟು ಬರುತ್ತಿದ್ದ ಕುರುಬ ಸಮುದಾಯದವರನ್ನೇ ನಂಬಿದ್ದ ಕಾಡುಗೊಲ್ಲ ಕುರಿಗಾಯಿಗಳು, ಈಗ ತಾವೇ ಒಂದು ಕುರಿಗೆ 25ರೂ.ನಂತೆ ಕೊಟ್ಟು ಬಂಡು ಕತ್ತರಿಸಿ ತಿಪ್ಪೆಗೆ ಸುರಿಯುತ್ತಿದ್ದಾರೆ. ಈ ಎರಡೂ ಸಮುದಾಯಗಳು ಈಗ ಯಮಯಾತನೆ ಅನುಭವಿಸುತ್ತಿವೆ. ಅತಿ ಕಡಿಮೆ ಸಂಖ್ಯೆಯಲ್ಲಿರುವ ಬಾಚಣಿಗೆ ಮಾಡುತ್ತಿದ್ದ ದೊಂಬರು, ಗಾಣಿಗರು, ಮೇದರ ಕುಟುಂಬಗಳೆಲ್ಲ ಊರಿನ ಬಸ್‌ಸ್ಟ್ಯಾಂಡಿನಲ್ಲಿ ಕಾಫಿ, ಟೀ ಮಾರುತ್ತಲೊ, ಕೂಲಿ ಮಾಡುತ್ತಲೊ, ಹೋಟೆಲ್‌ಗಳಲ್ಲಿ ಲೋಟ ತೊಳೆಯುತ್ತಲೊ ಜೀವನ ಸಾಗಿಸುತ್ತಿದ್ದಾರೆ. ಅಥವಾ ಬೇರೆ ಬೇರೆ ದಿನಗೂಲಿ ವೃತ್ತಿಗಳಿಗೆ ವರ್ಗಾವಣೆಯಾಗಿದ್ದಾರೆ! ನೋಡಲು ಇವೆಲ್ಲ ಹೃದಯವಿದ್ರಾವಕ ದೃಶ್ಯಗಳು. ಆಧುನಿಕತೆಯ ಮಹಾಪೂರದಲ್ಲಿ ನಶಿಸುತ್ತಿರುವುದು ಕೇವಲ ಕುಶಲಕಲೆಗಳು ಮಾತ್ರವಲ್ಲ! ತಮ್ಮ ವೃತ್ತಿಯನ್ನೇ ನಂಬಿ ಬದುಕುತ್ತಿದ್ದ ಸಣ್ಣ ಸಣ್ಣ ಸಮುದಾಯಗಳು ಮರೆವಿನಂಚಿಗೆ ಸರಿಯುತ್ತಿವೆ.

ಯಾವ ಕೌಶಲಗಳನ್ನು ಜನ ತಮ್ಮ ಅನುಭವದಲ್ಲಿ ಪರೀಕ್ಷಿಸಿ ಆವಿಷ್ಕರಿಸಿ; ಅದನ್ನೇ ತಮ್ಮ ಜೀವನೋಪಾಯದ ವೃತ್ತಿಯಾಗಿರಿಸಿಕೊಂಡಿದ್ದರೊ ಅವುಗಳನ್ನು ನಾಶಪಡಿಸುವುದು ಮಾನವ ಹತ್ಯಾಕಾಂಡದಷ್ಟೇ ಘೋರವಾದದ್ದು. ತೊರೆಕೋಲಮ್ಮನಹಳ್ಳಿಯಲ್ಲಿ ಸಿಕ್ಕಿದ ದೊಂಬರ ತಾಯಮ್ಮ 'ಬೆಳಗ್ಗೆಯಿಂದ ಹತ್ತಾರು ಹಳ್ಳಿಗಳನ್ನು ಸುತ್ತಿದರೂ ನಾವು ಮಾಡಿರುವ ಕವೆಗೋಲು, ಹಿಟ್ಟಿನ ದಬ್ಬೆ, ಕಡೆಯುವ ಮಂತು (ಕಡೆಗೋಲು), ಬಾಚಣಿಗೆ ಕೊಳ್ಳುವರಿಲ್ಲ, ಕೇಳುವವರೂ ಇಲ್ಲ. ಬರಿಗೈಯಲ್ಲಿ ಊರಿಗೆ ಮರಳುವಾಗ ಯಾರ ಮನೆಯಲ್ಲಾದರೂ ಎರಡು ತುತ್ತು ಭಿಕ್ಷೆ ಬೇಡಿ ತಿನ್ನೋ ಪರಿಸ್ಥಿತಿ ಬಂದೈತೆ. ಇವೆಲ್ಲ ಯಾರಿಗೆ ಹೇಳೋಣ?' ಎಂದು ನಿರಾಶೆಯ ಪರ್ವತವನ್ನೇ ಹೊತ್ತವಳಂತೆ ಹೇಳಿದಳು. ಆಧುನಿಕತೆ ಎನ್ನುವುದು ಆರಂಭದಲ್ಲಿ ಬಲಿ ಪಡೆಯುವುದು ಇಂಥ ಸಣ್ಣ ಸಣ್ಣ ಸಮುದಾಯಗಳನ್ನೇ! ಎಲ್ಲರನ್ನೂ ಪರಾವಲಂಬಿಯನ್ನಾಗಿ ಮಾಡಿಕೊಳ್ಳುವ ನಾಗರಿಕತೆ ಅಥವಾ ಆಧುನಿಕತೆ ಎನ್ನುವ ರಾಕ್ಷಸನಿಗೆ ನಾವು ತೆತ್ತ ಬೆಲೆಯಿದು!

ಭಾರತದ್ದು ನಿಶ್ಚಿತವಾಗಿ ಗ್ರಾಮ ಸಂಸ್ಕೃತಿಯ ಪರಂಪರೆ ಎಂದು ಅರಿತಿದ್ದ ಗಾಂಧೀಜಿ ಇಂತಹ ರಾಕ್ಷಸ ಸ್ವರೂಪದ ಪಲ್ಲಟವನ್ನು ಕುರಿತು 'ಬೃಹತ್ ಉತ್ಪಾದನೆಯ ತಂತ್ರವಿನ್ಯಾಸದೊಡಲಿನಲ್ಲಿ ಹಿಂಸಾಚಾರ, ನಿಸರ್ಗ ಘಾತುಕತನ ಮತ್ತು ಮಾನವ ವ್ಯಕ್ತಿತ್ವದ ದಮನ ಸೇರಿಕೊಂಡಿರುತ್ತವೆ. ನಾಗರಿಕತೆ ಎಂದರೆ ಅಪೇಕ್ಷೆಗಳನ್ನು ಹೆಚ್ಚಿಸಿಕೊಳ್ಳುವುದಲ್ಲ! ಬುದ್ಧಿಪೂರ್ವಕವಾಗಿ ಅಪೇಕ್ಷೆಗಳನ್ನು ನಿಗ್ರಹಿಸಿಕೊಳ್ಳುವುದಾಗಿದೆ' ಎಂದು ಹೇಳಿದ್ದರು. ಮರಳಿ ಗಾಂಧಿ ಚಿಂತನೆಯೆಡೆಗೆ ಬರುವುದಾದರೆ 'ಗೃಹ ಕೈಗಾರಿಕೆಯ ಯಂತ್ರಗಳಲ್ಲಿ ಎಲ್ಲ ತೆರನಾದ ಹೊಸ ಸುಧಾರಣೆಗಳನ್ನು ನಾನು ಸ್ವಾಗತಿಸುತ್ತೇನೆ; ಆದರೆ ವ್ಯಕ್ತಿಯೊಬ್ಬ ಒಂದು ನೂತನ ಯಂತ್ರವನ್ನು ಕಂಡುಹಿಡಿದು, ಅದರಿಂದ ಇಡೀ ಭಾರತದ ಜಮೀನುಗಳೆಲ್ಲವನ್ನು ಉತ್ತು, ವ್ಯವಸಾಯೋತ್ಪನ್ನಗಳನ್ನೆಲ್ಲಾ ತನ್ನ ಅಧೀನದಲ್ಲಿಟ್ಟುಕೊಳ್ಳಲು ಸಮರ್ಥನಾಗಿಬಿಟ್ಟರೆ, ಆಗ ಲಕ್ಷಾಂತರ ಜನ ಬೇರೆ ಉದ್ಯೋಗವಿಲ್ಲದೆ ಉಪವಾಸ ಸಾಯಬೇಕಾಗುತ್ತದೆ' ಎಂದು ಆತಂಕಪಡುತ್ತಿದ್ದರು. ಇಷ್ಟರ ನಡುವೆಯೂ ಇವು 'ಕಾಲವನ್ನು ಹಿಂದಕ್ಕೆ ತಳ್ಳುವ ಪ್ರಯತ್ನವಲ್ಲ' ಎಂದು ಹೇಳುವುದನ್ನು ಗಾಂಧಿ ಮರೆಯುತ್ತಿರಲಿಲ್ಲ. ಈ ಮೂಲಕ ಮಾನವ ಜಗತ್ತು ಮಾನವ ಕಲ್ಯಾಣವನ್ನು ತನ್ನ ಸಮಗ್ರ ಅರ್ಥದಲ್ಲಿ ಸಾಧಿಸಬೇಕಾದರೆ ಈಗಿನ ಅಧಿಕಾರ, ಹಣ ಮತ್ತು ಸ್ವಾಮ್ಯ ಎಲ್ಲವೂ ಸಣ್ಣ ಸಣ್ಣ ಸುವ್ಯವಸ್ಥಿತ ಸಾಮಾಜಿಕ ನ್ಯಾಯವಿರುವ ಸಮಾಜಗಳಲ್ಲಿ ವಿಕೇಂದ್ರಿಕೃತವಾಗುವಂತೆ ಪುನರ್‌ರಚಿತವಾಗಬೇಕು. ಮಾನವೀಯ ಮೌಲ್ಯಗಳು, ಶ್ರಮಜೀವನ, ವರ್ಗನಿರಸನ, ಸಮಾನತೆ ಜೀವನದಲ್ಲಿ ನೆಲೆಗೊಳ್ಳುವಂತಾಗಬೇಕು ಎಂದು ಖಚಿತವಾಗಿ ಹೇಳುತ್ತಿದ್ದರು.

ಕುಶಲಕರ್ಮಿಗಳ ಬದುಕಿನಲ್ಲಿ ಅತಂತ್ರಸ್ಥಿತಿ, ವ್ಯಾಕುಲತೆ ಹಾಗೂ ದುಃಖವನ್ನು ಬಿಟ್ಟರೆ ಈಗ ಮತ್ತೇನೂ ಉಳಿದಿಲ್ಲ! ಇದುವರೆಗಿನ ಇವರ ಪ್ರಾರ್ಥನೆಯೆಲ್ಲ ಗಾಳಿಯಲ್ಲಿ ಕರಗಿಹೋಗಿದೆ. ಅಭಿವೃದ್ಧಿಯ ಚಿಹ್ನೆಗಳಾಗಿದ್ದ ಬೃಹದಾಕಾರದ ಕಟ್ಟಡಗಳು, ರಸ್ತೆಗಳು, ಯಂತ್ರಗಳು, ವಾಹನಗಳು, ಯೋಜನೆಗಳು ಇವರ ದೃಷ್ಟಿಯಲ್ಲಿ ದಾಳಿಕೋರರಂತೆ ಗೋಚರಿಸುತ್ತಿವೆ. ಇವೆಲ್ಲ ಕೇವಲ ಭಾವನಾತ್ಮಕವಾದ ಸರಣಿಯಲ್ಲ! ಬದಲಿಗೆ ಗ್ರಾಮ ಭಾರತದ ಆರ್ಥಿಕ ಮತ್ತು ನೈತಿಕ ಪುನಶ್ಚೇತನಕ್ಕೆ ದಾರಿಯನ್ನು ಕಂಡುಕೊಳ್ಳುವಂತಹವು. ಸಣ್ಣ ಸಣ್ಣ ಸಮುದಾಯಗಳ ಕಾಯಕಭಂಗ ಮತ್ತು ತೇಜೋಭಂಗ ಮಾಡಿರುವುದನ್ನು ಮನುಕುಲಕ್ಕೆ ಎಸಗಿದ ದ್ರೋಹ ಎಂದು ಎಲ್ಲಿಯವರೆಗೆ ಆಧುನಿಕತೆಯ ಮೆದುಳು ತಿಳಿಯುವುದಿಲ್ಲವೊ ಅಲ್ಲಿಯವರೆಗೆ ಭಾರತದ ಪುಣ್ಯವೆಲ್ಲವೂ ಒಂದೊಂದಾಗಿ ನಿರ್ಗಮಿಸುತ್ತಿರುತ್ತದೆ.

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ನಿನ್ನನ್ನು ಪೀಡಿಸುವ ಸಂಕಟಗಳನ್ನು ನಗುನಗುತ್ತ ನಾಶಪಡಿಸು.

  —ಸ್ವಾಮಿ ವಿವೇಕಾನಂದ

- ತಾನು ಚೆನ್ನಾಗಿ ಬದುಕಿದ್ದೇನೆ ಎಂದು ಧೈರ್ಯಪಡಬಲ್ಲವನು ಸಾವಿಗೆ ಅಂಜುವುದಿಲ್ಲ.

  —ಶಿವರಾಮ ಕಾರಂತ

- ಮನುಷ್ಯನನ್ನು ಕಡೆಗಣಿಸಿ ಮಾಡಿದ ಯಾವುದೇ ಸತ್ಕರ್ಮ ನಿರರ್ಥಕ, ಅಪ್ರಯೋಜಕ.

  —ಕೆ.ಎಸ್. ನಿಸಾರ್ ಅಹಮದ್

- ಜಗತ್ತಿನಲ್ಲಿ ಹೇಳುವವರಿಗಿಂತ, ಹೇಳಿದಂತೆ ನಡೆಯುವವರ ಯೋಗ್ಯತೆ ಹೆಚ್ಚಿನದು.

  —ಗಳಗನಾಥ

- ನಾನು ತಪ್ಪು ಮಾಡದಿದ್ದರೆ ಮಾನವನೇ ಅಲ್ಲ. ನೀನು ಕ್ಷಮಿಸದಿದ್ದರೆ ನೀನು ದೇವರೇ ಅಲ್ಲ.

  —ಎಸ್.ವಿ. ಪರಮೇಶ್ವರ ಭಟ್ಟ

- ಎಂತಹ ಕಟು ಪ್ರಸಂಗ ಬಂದರೂ ಎದೆಗುಂದಬಾರದು. ಇದೇ ಸುಖಿಯಾಗಿರುವುದರ ರಹಸ್ಯ.

  —ದ.ರಾ. ಬೇಂದ್ರೆ